**ದಿ: 13-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಮದುವರಿದ ವಾಟೀಸವಾಲು: ಶ್ರೀ ಎಮ್ ಎಮ್ ವಕೀಲರಿಂದ:**

1. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲ ಬರೆದಿರುವ ವಿಷಯದ ಬಗ್ಗೆ ನಿಮಗೆ ಗೊತ್ತಿದೆಯಾ ಎಂದರೆ ಸಾಕ್ಷಿಯು ಗೊತ್ತಿದೆ ಎನ್ನುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳ ಸರ್ವೆ ನಂಬರ್ ಹಿಸ್ಸಾ ನಂಬರ್, ವಿಸ್ತೀರ್ಣ ಮತ್ತು ಅವುಗಳು ಯಾವ ಊರಿನಲ್ಲಿವೆ ಮತ್ತು ಅವುಗಳ ಚಕ್ ಬಂದಿಯನ್ನು ಬರೆಸಿದ್ದೇನೆ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಮೇಲೆ ಹೇಳಿದ ವಿಷಯಗಳನ್ನು ಬರೆಸಿಲ್ಲ ಎಂದರೆ ಸಾಕ್ಷಿಯು ಬರೆಸಿದ್ದೇನೆ ಎನ್ನುತ್ತಾರೆ. ಪ್ರತಿವಾದಿ ಸಂಖ್ಯೆ 2 ಮತ್ತು 3 ನೀವು ಬ್ರಾಹ್ಮಣರು ಎಂದರೆ ಸರಿ. ಪ್ರತಿವಾದಿ ನಂಬರ್ 2 ಮತ್ತು 3 ನನಗೆ ಪರಿಚಯ ಇದ್ದಾರೆ. ಪ್ರತಿವಾದಿ 3 ಪ್ರತಿವಾದಿ 2 ರವರ ಮಗನಾಗಬೇಕು. 2ನೇ ಪ್ರತಿವಾದಿ ಲೀಲಾದೇವಿಯವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಅವರ ಗಂಡನ ಹೆಸರು ವೆಂಕಟೇಶ ದೇವರು. ಅವರನ್ನು ವೆಂಕಟಪ್ಪಯ್ಯ ದೇವರು ಎನ್ನುತ್ತಾರೆ ಎಂದರೆ ಸರಿ. ನೀವು ವಕೀಲರಿಗೆ ಮಾಹಿತಿ ಕೊಡುವಾಗ, ವೆಂಕಟಪ್ಪಯ್ಯ ದೇವರು 2ನೇ ಪ್ರತಿವಾದಿಯ ಗಂಡ ಎಂದು ಕೊಟ್ಟಿದ್ದೀರೋ ಅಥವಾ ತಂದೆ ಎಂದು ಮಾಹಿತಿ ಕೊಟ್ಟಿದ್ದೀರೋ ಎಂದರೆ ಸಾಕ್ಷಿಯು ಗಂಡ ಎಂದು ಮಾಹಿತಿ ಕೊಟ್ಟಿದ್ದೇನೆ ಎನ್ನುತ್ತಾರೆ. ನಿಮ್ಮ ವಾದ ಪತ್ರದಲ್ಲಿ 2ನೇ ಪ್ರತಿವಾದಿಯ ತಂದೆ ವೆಂಕಟಪ್ಪಯ್ಯ ದೇವರು ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿಯು ಅದು ಗಂಡ ಆಗಬೇಕು ಎನ್ನುತ್ತಾರೆ. ನಾನು ಚಿಕ್ಕವನಿದ್ದಾಗ ವೆಂಕಟಪ್ಪಯ್ಯ ದೇವರು ಇವರನ್ನು ನೋಡಿದ್ದೇನೆ ಎನ್ನುತ್ತಾರೆ. ಆಗ ನಾನು ಎಸ್ ಎಸ್ ಎಲ್ ಸಿ ಓದುತ್ತಿದ್ದೇನು. ಈಗ ವೆಂಕಟಪ್ಪಯ್ಯ ದೇವರು ತೀರಿಕೊಂಡಿರುತ್ತಾರೆ. ಅವರು ಎಷ್ಟು ವರ್ಷದ ಹಿಂದೆ ತೀರಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ವೆಂಕಟಪ್ಪಯ್ಯ ದೇವರು ಇವರ ತಂದೆಯ ಹೆಸರು ಬೀಮಪ್ಪಯ್ಯ ದೇವರು. ಬೀಮಪ್ಪಯ್ಯ ದೇವರು ಇವರ ತಂದೆಯ ಹೆಸರು ವಾಸಪ್ಪಯ್ಯ ದೇವರು. ವಾಸಪ್ಪಯ್ಯ ದೇವರು ವಂಶಸ್ಥರು ನಮಗೆ ಸಂಬಂಧಿಕರಿಲ್ಲ. ವಾಸಪ್ಪಯ್ಯ ದೇವರು ಇವರು ಯಾವಾಗ

ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರ ಮಗ ಭೀಮಪ್ಪಯ್ಯ ದೇವರು ಕೋವಿಡ್ ಆದ ಮೇಲೆ ತೀರಿಕೊಂಡಿರುತ್ತಾರೆ.

2. ದಾವೆಯನ್ನು 3 ಜಮೀನುಗಳ ಮೇಲೆ ಮಾಡಿದ್ದೇನೆ. ಸ ನಂ 19/1ಅ, ವಿಸ್ತೀರ್ಣ 02 ಎಕರೆ 25 ಗುಂಟೆ, ಸ ನಂ 21/* ವಿಸ್ತೀರ್ಣ 01 ಎಕರೆ 12 ಗುಂಟೆ, ಮತ್ತು ಸ ನಂ 19/2, ವಿಸ್ತೀರ್ಣ 00-29 ಗುಂಟೆ, ಜಮೀನುಗಳ ಮೇಲೆ ದಾವೆ ಸಲ್ಲಿಸಿರುತ್ತೇನೆ. ಈ ಜಮೀನುಗಳ ಚಕ್ ಬಂದಿ ನನಗೆ ಹೇಳಲು ಬರುತ್ತದೆ. ಸ ನಂ 19/1ಅ, 02 ಎಕರೆ 25 ಗುಂಟೆ ಜಮೀನಿನ ಚಕ್ ಬಂದಿ ಪೂರ್ವಕ್ಕೆ ಲಿಂಗನಗೌಡ ನ ಹೊಲ, ಪಶ್ಚಿಮಕ್ಕೆ ಅಮೀನರಡ್ಡೆಪ್ಪಗೌಡ ಇವರ ಜಮೀನು, ಉತ್ತರಕ್ಕೆ ಲೀಲಾದೇವರು ಜಮೀನು, ದಕ್ಷಿಣಕ್ಕೆ - ಮಹಾದೇವಪ್ಪನ ಹೊಲ. ಲೀಲಾದೇವರು ಈ ದಾವೆಯಲ್ಲಿ 2ನೇ ಪ್ರತಿವಾದಿಯಾಗಿರುತ್ತಾರೆ. ಉತ್ತರ ದಿಕ್ಕಿಗೆ ಇರುವ 2ನೇ ಪ್ರತಿವಾದಿ ಲೀಲಾದೇವರು ಇವರ ಜಮೀನಿನ ಸರ್ವೆ ನಂಬರ್ ನನಗೆ ಹೇಳಲು ಆಗುವುದಿಲ್ಲ. ಸ ನಂ 19/2 ವಿಸ್ತೀರ್ಣ 00-29 ಗುಂಟೆ ಜಮೀನು ಸ ನಂ 19/1ಅ, 02 ಎಕರೆ 25 ಗುಂಟೆ ಜಮೀನಿನ ಪಕ್ಕದಲ್ಲಿಯೇ ಇರುತ್ತದೆ. ಅದರ ಚಕ್‌ಬಂದಿ ನನಗೆ ಗೊತ್ತಿರುವುದಿಲ್ಲ. ಈ ಎರಡು ಜಮೀನುಗಳು ಅಕ್ಕ ಪಕ್ಕದಲ್ಲಿವೆ ಎಂದು ನೀವು ವಾದ ಪತ್ರದಲ್ಲಿ ಹೇಳಿ ಬರೆಸಿದ್ದಿರಾ ಎಂದರೆ ಬರೆಸಿದ್ದೇನೆ ಎನ್ನುತ್ತಾರೆ. ಆ ಎರಡು ಜಮೀನುಗಳ ಪ್ರತ್ಯೇಕ ಕ್ರಮ ಸಂಖ್ಯೆ ಪ್ರತ್ಯೇಕ ಚಕ್‌ಬಂದಿ ತೋರಿಸಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸ ನಂ 21/* ವಿಸ್ತೀರ್ಣ 01 ಎಕರೆ 12 ಗುಂಟೆ, ಜಮೀನಿನ ಚಕ್ ಬಂದಿ ಪೂರ್ವ ಕ್ಕೆ ಬಸವರಾಜ ರವರ ಹೊಲ, ಪಶ್ಚಿಮಕ್ಕೆ ಅಮೀನರಡ್ಡೆಪ್ಪ ರವರ ಹೊಲ, ಉತ್ತರಕ್ಕೆ - ಸೈಯ್ಯದಸಾಬ ಇವರ ಹೊಲ, ದಕ್ಷಿಣಕ್ಕೆ - ಬಸವರಾಜಪ್ಪ ಅರಷಿಣಗಿ ಇವರ ಹೊಲ. ಸರ್ವೆ ಎದ ನಂಬರ್ 19 ಒಟ್ಟು ಕ್ಷೇತ್ರ ಎಷ್ಟು ಇದೆ ಮತ್ತು ನಿಮ್ಮ ಪಟ್ಟಿ ಸೇರಿ ಬೇರೆ ಎಷ್ಟು ಪಟ್ಟಿಗಳಿವೆ ಮತ್ತು ಆ ಪಟ್ಟಿಗಳು ಯಾರು ಯಾರಿಗೆ ಸೇರಿವೆ ಎಂದರೆ ಸಾಕ್ಷಿಯು ಪಕ್ಕದಲ್ಲಿರುವ ಪಟ್ಟಿಗಳ ಬಗ್ಗೆ ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ.

3. ಸರ್ವೆ ನಂಬರ್ 19 ರಲ್ಲಿ 2ನೇ ಪ್ರತಿವಾದಿಯ ಗಂಡನ ತಾತಾ ವಾಸಪ್ಪಯ್ಯ ದೇವರು ಇವರು ಜಮೀನುಗಳು ಇವೆ ಎಂದರೆ ಸಾಕ್ಷಿಯು ಇವೆ ಎನ್ನುತ್ತಾರೆ. ಸ ನಂ 19 ರಲ್ಲಿ ದಾವಾ ಜಮೀನುಗಳ ವಿಸ್ತೀರ್ಣ ಬಿಟ್ಟು ಬೇರೆ ಜಮೀನುಗಳು ಸ ನಂ 19 ರಲ್ಲಿ ಒಟ್ಟು 03 ಎಕರೆ 14 ಗುಂಟೆ ಮಾತ್ರ ನಿಮಗೆ ಇರುತ್ತದೆ. ಸರ್ವೆ ನಂಬರ್ 19 ರಲ್ಲಿ ವಾಸಪ್ಪಯ್ಯ ದೇವರು ಇವರಿಗೆ ಎಷ್ಟು ಎಕರೆ ಜಮೀನು ಸೇರಿದೆ ಎಂದು ನನಗೆ ಗೊತ್ತಿಲ್ಲ. ಸ ನಂ 21 ರಲ್ಲಿ ಒಟ್ಟು ಎಷ್ಟು ಜಮೀನು ವಿಸ್ತೀರ್ಣ ಇದೆ ಮತ್ತು ಎಷ್ಟು ಪಟ್ಟಿಗಳಿವೆ ಎಂದು ನನಗೆ ಹೇಳಲು ಆಗುವುದಿಲ್ಲ. ಸ ನಂ 21 ರಲ್ಲಿ ವಾಸಪ್ಪಯ್ಯ ದೇವರು ಇವರಿಗೆ ಎಷ್ಟು ಎಕರೆ ಜಮೀನುಗಳು ಇವೆ ಎಂದರೆ ಸಾಕ್ಷಿಯು ಇರಬಹುದು ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಸ ನಂ 21 ರಲ್ಲಿ ದಾವಾ ಜಮೀನು ವಿಸ್ತೀರ್ಣ ಬಿಟ್ಟು ಬೇರೆ ಜಮೀನುಗಳು ಇರುವುದಿಲ್ಲ.

ಮುಮದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ